

بسم اللهِ الرّحمٰن الرّحيم

# ವಾಗ್ದತ್ತ ಮಹ್‌ದಿ–ಮಸೀಹರ ಸತ್ಯತೆಯ ಚಿಹ್ನೆಗಳು...

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಪಂಚಮ ಖಲೀಫ, ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್, ಅವರು ಲಂಡನ್‌ನ 'ಬೈತುಲ್ ಫುತೂಹ್' ಮಸೀದಿಯಲ್ಲಿ ನೀಡಿದ ಶುಕ್ರವಾರದ ಖುತುಬದ ಸಾರಾಂಶ– 28.03.2014)

ತಶಹ್ಹುದ್, ತಅವ್ವುಝ್, ಸೂರತುಲ್ ಫಾತಿಹಾ ತಿಲಾವತ್ ಮಾಡಿದ ನಂತರ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್ ಹೀಗೆ ಹೇಳಿದರು:

ಇಂದು ಸಹ ನಾನು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಸತ್ಯತೆಗೆ ಸಾಕ್ಷ್ಯವಾಗಿ ಪ್ರಕಟಗೊಂಡ ದೃಷ್ಟಾಂತಗಳ ಬಗ್ಗೆ ಅವರ ಕೆಲವು ಪ್ರಸ್ತಾವನೆಗಳನ್ನೂ ಇತರ ಕೆಲವರು ಆ ಬಗ್ಗೆ ವರದಿ ಮಾಡಿದ ಕೆಲವು ಘಟನೆಗಳನ್ನೂ ನಿಮ್ಮ ಮುಂದೆ ಪ್ರಸ್ತಾಪಿಸುವೆನು.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೀಗೆ ಹೇಳುತ್ತಾರೆ:

ಇಂದು 1906 ಜುಲಾಯಿ ದಿನಾಂಕ 16ರ ತನಕ ಅಲ್ಲಾಹನು ನನ್ನ ಪರವಾಗಿ ಪ್ರಕಟಿಸಿದ ದೃಷ್ಟಾಂತಗಳನ್ನು ಒಂದೊಂದಾಗಿ ಎಣಿಸುವುದಾದರೆ, ನಾನು ಅಲ್ಲಾಹನ ಹೆಸರಲ್ಲಿ ಪ್ರಮಾಣ ಮಾಡಿ ಹೇಳುತ್ತೇನೆ ಅವುಗಳ ಸಂಖ್ಯೆ ಮೂರು ಲಕ್ಷಕ್ಕಿಂತಲೂ ಹೆಚ್ಚಾಗಿವೆ. ನನ್ನ ಪ್ರಮಾಣ ವಚನದ ಬಗ್ಗೆ ಯಾರಿಗಾದರೂ ನಂಬಿಕೆ ಇಲ್ಲವಾದರೆ ಅವುಗಳ ಬಗ್ಗೆ ಸಾಕ್ಷ್ಯಾಧಾರಗಳನ್ನು ನಾನು ನೀಡಬಲ್ಲೆನು. ಕೆಲವು ದೃಷ್ಟಾಂತಗಳು ಹೇಗಿವೆ ಎಂದರೆ, ಅಲ್ಲಾಹನು ಪ್ರತಿಯೊಂದು ಸಂದರ್ಭದಲ್ಲಿ ತನ್ನ ವಾಗ್ದಾನ ಪ್ರಕಾರ ಶತ್ರುಗಳ ಕೆಡುಕುಗಳಿಂದ ನನ್ನನ್ನು ಸಂರಕ್ಷಿಸಿದನು. ಬೇರೆ ಕೆಲವು ದೃಷ್ಟಾಂತಗಳು ಹೇಗಿವೆ ಎಂದರೆ ಅಲ್ಲಾಹನು ತನ್ನ ವಾಗ್ದಾನ ಪ್ರಕಾರ ಪ್ರತಿಯೊಂದು ಸಂದರ್ಭದಲ್ಲಿ ನನ್ನ ಆವಶ್ಯಕತೆಗಳನ್ನೂ ಬೇಡಿಕೆಗಳನ್ನೂ ಈಡೇರಿಸಿದನು. ಬೇರೆ ಕೆಲವು ದೃಷ್ಟಾಂತಗಳು,

**ಇನ್ನೀ ಮುಹೀನುನ್ ಮನ್ ಅರಾದ ಇಹಾನತಕ**

"ನಿನ್ನನ್ನು ಅಪಮಾನಿಸಲು ಬಯಸುವವನನ್ನು ನಾನು ನಿಶ್ಚಯವಾಗಿಯೂ ಅಪಮಾನಕ್ಕೆ ಗುರಿಪಡಿಸುವೆನು" ಎಂಬ ಅವನ ವಾಗ್ದಾನ ಪ್ರಕಾರ ನನ್ನ ಮೇಲೆ ಆಕ್ರಮಣ ಮಾಡುವವರನ್ನು ಅವನು ಹೀನೈಸಿದನು. ಬೇರೆ ಕೆಲವು ದೃಷ್ಟಾಂತಗಳು ಹೇಗಿದ್ದುವು ಎಂದರೆ ನನ್ನ ವಿರುದ್ಧ ಮೊಕದ್ದಮೆ ಹೂಡಿದವರ ಮೇಲೆ ಅಲ್ಲಾಹನು ತನ್ನ ಭವಿಷ್ಯವಾಣಿಗಳ ಪ್ರಕಾರ ನನಗೆ ವಿಜಯವನ್ನು ದಯಪಾಲಿಸಿದನು. ಕೆಲವು ದೃಷ್ಟಾಂತಗಳು ನನ್ನ ವಾದದ ನಂತರ, ನಾನು ಜೀವಿಸಿದ ಕಾಲಾವಧಿಗೆ ಸಂಬಂಧ ಪಟ್ಟದ್ದಾಗಿದೆ. ಲೋಕಾರಂಭ ಮೊದಲ್ಗೊಂಡು ಯಾವ ಸುಳ್ಳುವಾದಿಯೂ ತನ್ನ ವಾದದ ನಂತರ ಇಷ್ಟು ದೀರ್ಘಕಾಲ ಜೀವಿಸಲಿಲ್ಲ. ಕೆಲವು ದೃಷ್ಟಾಂತಗಳು ಈ ಕಾಲದ ಸ್ಥಿತಿಗೆ ಸಂಬಂಧಿಸಿದೆ. ಈ ಕಾಲಘಟ್ಟ ಒಬ್ಬ ಇಮಾಮ್ ಜನಿಸಬೇಕಾಗಿದೆ ಎಂಬ ಆವಶ್ಯಕತೆಯನ್ನು ಸೂಚಿಸುತ್ತದೆ. ಬೇರೆ ಕೆಲವು ದೃಷ್ಟಾಂತಗಳು ಹೇಗಿವೆ ಎಂದರೆ ನನ್ನ ಸ್ನೇಹಿತರ ಪರವಾಗಿ ನಾನು ಮಾಡಿದ ಪ್ರಾರ್ಥನೆಗಳು ಅಂಗೀಕರಿಸಲ್ಪಟ್ಟವು. ಕೆಲವು ದೃಷ್ಟಾಂತಗಳು ಹೇಗಿವೆ ಎಂದರೆ ದುಷ್ಟರಾದ ಶತ್ರುಗಳ ವಿರುದ್ಧ ನಾನು ಮಾಡಿದ ಪ್ರಾರ್ಥನೆಗಳು ಅಂಗೀಕರಿಸಲ್ಪಟ್ಟವು. ಕೆಲವು ದೃಷ್ಟಾಂತಗಳು ಹೇಗಿವೆ ಎಂದರೆ ಕೆಲವರು ಅಪಾಯಕಾರಿ ರೋಗಗಳಿಂದ ಗುಣಮುಖರಾದರು. ರೋಗವು ಗುಣವಾಗುವ ಮೊದಲೇ ನನಗೆ ಅದರ ಬಗ್ಗೆ ತಿಳಿಸಲಾಗಿತ್ತು. ಬೇರೆ ಕೆಲವು ದೃಷ್ಟಾಂತಗಳು ಹೇಗೆ ಇದ್ದುವು ಎಂದರೆ ಗಣ್ಯ ಮಹಾನುಭಾವರಾದ ಕೆಲವು ಪ್ರಸಿದ್ಧ ಫಕೀರರಿಗೆ ನನ್ನ ಸತ್ಯತೆ ಬಗ್ಗೆ ಕನಸುಗಳು ಕಾಣಿಸಿದುವು. ಉದಾಹರಣೆಗೆ ಸಿಂಧ್‌ನಲ್ಲಿರುವ ಸಾಹಿಬುಲ್ ಇಲ್ಮ್ ದರ್ಗಾದ ಮೇಲ್ವಿಚಾರಕರು– ಅವರಿಗೆ ಒಂದು ಲಕ್ಷದಷ್ಟು ಶಿಷ್ಯರು ಇದ್ದಾರೆ– ಕನಸಿನಲ್ಲಿ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮರನ್ನು ಕಂಡರು. ಅದೇ ರೀತಿ ಚಾಚ್‌ಡಾಂನಲ್ಲಿರುವ ಖ್ವಾಜಾ ಗುಲಾಮ್ ಫರೀದ್ ಸಾಹೇಬರು ಸಹ ಸ್ವಪ್ನವನ್ನು ಕಂಡರು. ಕೆಲವು ದೃಷ್ಟಾಂತಗಳು ಹೇಗಿವೆ ಎಂದರೆ ಸಾವಿರಾರು ಜನರು ನನ್ನನ್ನು ಬೈಅತ್ ಮಾಡಿದುದು ಅವರಿಗೆ ಕನಸಿನಲ್ಲಿ "ಈ ವ್ಯಕ್ತಿ ಸತ್ಯವಾದಿ, ಅಲ್ಲಾಹನಿಂದ ಕಳುಹಿಸಲ್ಪಟ್ಟವನು" ಎಂದು ಹೇಳಲಾಗಿತ್ತು. ಕೆಲವರಿಗೆ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮರು ಸ್ವತಃ ಕನಸಿನಲ್ಲಿ ಕಾಣಿಸಿಕೊಂಡು "ಲೋಕಾಂತ್ಯವಾಗಲಿದೆ, ಇವರು ಅಲ್ಲಾಹನ ಕೊನೆಯ ಖಲೀಫ ಮತ್ತು ಮಸೀಹ್ ಮೌಊದ್ ಆಗಿದ್ದಾರೆ" ಎಂದು ಹೇಳಿದರು. ಬೇರೆ ಕೆಲವು ದೃಷ್ಟಾಂತಗಳು ಹೇಗಿವೆ ಎಂದರೆ ಕೆಲವು ಹಿರಿಯ ವ್ಯಕ್ತಿಗಳು ನನ್ನ ಜನನಕ್ಕೆ ಅಥವಾ ನಾನು ಪ್ರಾಪ್ತವಯಸ್ಕನಾಗುವ ಮೊದಲೇ ನನ್ನ ಹೆಸರನ್ನು ಹೇಳಿ ನಾನು ಮಸೀಹ್ ಮೌಊದ್ ಆಗಲಿರುವೆನು ಎಂದು ಭವಿಷ್ಯ ನುಡಿದರು. ನಿಅ್‌ಮತುಲ್ಲಾ ವಲಿ ಮತ್ತು ಲುಧಿಯಾನ ಜಿಲ್ಲೆಯ ಜಮಾಲ್‌ಪುರ ನಿವಾಸಿ ಮಿಯಾಂ ಗುಲಾಬ್ ಶಾಹ್ ಇವರಲ್ಲಿ ಸೇರಿದ್ದಾರೆ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಒಂದು ಸ್ಥಳದಲ್ಲಿ ಹೀಗೆ ಹೇಳಿದರು: ನಾನು ಕಶ್ಫೆ ಖುಬೂರ್ ಮಾಡಬಲ್ಲೆ. ಎಂದರೆ ಮೃತನಾದ ಮಹಾನುಭಾವರ ಸ್ಥಿತಿಯನ್ನು ತಿಳಿದುಕೊಂಡು ವಿವರಿಸಲು ನನಗೆ ಸಾಧ್ಯವಿದೆ. ಅವರೊಂದಿಗೆ ಭೇಟಿ ಸಹ ಮಾಡಿಸಲು ಸಾಧ್ಯವಿದೆ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಅಲ್ಲಾಹನು ನನಗೆ ಹೀಗೆ ಸಂದೇಶವಾಣಿ ಅವತೀರ್ಣ ಮಾಡಿದನು, **ಯಅ್‌ತೂನ ಮಿನ್ ಕುಲ್ಲಿ ಫಜ್ಜಿನ್ ಅಮೀಖ್** -"ವಾಹನ ಸಂಚಾರದಿಂದ ಕುಳಿಬಿದ್ದ ಮಾರ್ಗಗಳಿಂದ ಜನರು ನಿನ್ನ ಬಳಿಗೆ ಬರುವರು." **ವ ಯಅ್‌ತೀಕ ಮಿನ್ ಕುಲ್ಲಿ ಫಜ್ಜಿನ್ ಅಮೀಖ್**– "ವಾಹನ ಸಂಚಾರದದಿಂದ ಕುಳಿಬಿದ್ದ ಮಾರ್ಗಗಳಿಂದ ಸಾಮಾಗ್ರಿಗಳು

ನಿನ್ನ ಬಳಿಗೆ ತಲುಪುವುವು.'' ಅಲ್ಲಾಹನು ನನ್ನೊಂದಿಗೆ ಮೇಲೆ ವಿವರಿಸಿದಂತೆ ಹೇಳಿದಾಗ ನನ್ನ ಬಗ್ಗೆ ಯಾರೂ ತಿಳಿದಿರಲಿಲ್ಲ. ಈ ಸಂದೇಶವಾಣಿ ಈಗ ಯಾವರೀತಿ ಈಡೇರುತ್ತಾ ಇದೆ ಎಂದು ನೋಡಿರಿ. ಇದಕ್ಕೆ ಸಮಾನವಾದುದು ಬೇರೆ ಯಾವುದಾದರೂ ಇದೆಯೇ?

ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ''ನಾನು ಸತ್ಯವಾಗಿ ಹೇಳುತ್ತೇನೆ. ನೀವು ಅಲ್ಲಾಹನ ದೃಷ್ಟಾಂತಗಳನ್ನು ನಿರ್ಲಕ್ಷಿಸಬೇಡಿರಿ. ನೀವು ಅವುಗಳನ್ನು ಮಹತ್ವಹೀನವೆಂದು ಭಾವಿಸಬೇಡಿರಿ. ಹಾಗೆ ಮಾಡಿದರೆ ನೀವು ದೇವನ ಅನುಗ್ರಹದಿಂದ ವಂಚಿತರಾಗುವಿರಿ. ಅದನ್ನು ಅಲ್ಲಾಹನು ಇಷ್ಟಪಡಲಾರನು. ಇತೀಚೆಗೆ ನಡೆದ ಘಟನೆ ನೋಡಿರಿ. ಲೇಖ್‌ರಾಮನು ಅಲ್ಲಾಹನ ಅದ್ಭುತ ದೃಷ್ಟಾಂತದ ಪ್ರಕಟಣೆಯ ರೂಪದಲ್ಲಿ ಕೊಲ್ಲಲ್ಪಟ್ಟನು. ನಾನು ಪ್ರಕಟಿಸಿದ ಈ ಭವಿಷ್ಯವಾಣಿಗೆ ಕೋಟಿಗಟ್ಟಲೆ ಜನರು ಸಾಕ್ಷಿಗಳಾಗಿದ್ದಾರೆ. ಲೇಖ್‌ರಾಮ್ ಸ್ವತಃ ಆ ಭವಿಷ್ಯವಾಣಿಯನ್ನು ಪ್ರಚಾರ ಮಾಡಿದ್ದನು. ಅವನು ಹೋದಲೆಲ್ಲಾ ಅದರ ಬಗ್ಗೆ ವಿವರಣೆ ನೀಡಿದ್ದನು. ಇಸ್ಲಾಮ್ ಧರ್ಮದ ಸತ್ಯತೆ ಪ್ರಕಟಗೊಳ್ಳಲು ಅವನೇ ಈ ದೃಷ್ಟಾಂತವನ್ನು ಅಪೇಕ್ಷಿಸಿದ್ದನು. ಅದನ್ನು ಅವನು ಸತ್ಯ ಧರ್ಮ ಮತ್ತು ಸುಳ್ಳು ಧರ್ಮದ ಪರೀಕ್ಷೆಯ ಮಟ್ಟವನ್ನಾಗಿ ನಿಶ್ಚಯಿಸಿದ್ದನು. ಕೊನೆಗೆ ಅವನು ಇಸ್ಲಾಮ್ ಧರ್ಮದ ಸತ್ಯತೆಗೆ ಮತ್ತು ನನ್ನ ಸತ್ಯತೆಗೆ ತನ್ನ ರಕ್ತದಿಂದ ಸಾಕ್ಷ್ಯ ನೀಡುವವನಾದನು. ಈ ದೃಷ್ಟಾಂತವನ್ನು ಸುಳ್ಳೆಂದು ಹೇಳುವುದು ಮತ್ತು ಅದನ್ನು ನಿರ್ಲಕ್ಷಿಸುವುದು ಎಂತಹ ಅನ್ಯಾಯ ಮತ್ತು ದೌರ್ಜನ್ಯಕರವಾಗಿದೆ! ಇಂತಹ ಸ್ಪಷ್ಟ ದೃಷ್ಟಾಂತಗಳನ್ನು ನಿರಾಕರಿಸುವವರು ಸ್ವತಃ ಲೇಖ್‌ರಾಮರಾಗುತ್ತಾರೇ ಹೊರತು ಬೇರೆ ಏನು?

ನನಗೆ ಬಹಳ ಖೇದ ಉಂಟಾಗುತ್ತದೆ. ಅಲ್ಲಾಹನು ಎಷ್ಟು ಅನುಗ್ರಹ ನೀಡಿದನು. ಅವನು ಪ್ರತಿಯೊಂದು ಸಮುದಾಯಕ್ಕೆ ಸಂಬಂಧಿಸಿ ದೃಷ್ಟಾಂತಗಳನ್ನು ಪ್ರಕಟಿಸಿದನು. ಕಠೋರವಾದ ದೃಷ್ಟಾಂತಗಳನ್ನೂ ಸೌಮ್ಯ ದೃಷ್ಟಾಂತಗಳನ್ನೂ ಅವನು ಪ್ರಕಟಿಸಿದನು. ಅವುಗಳನ್ನು ಕಸಕಡ್ಡಿಯ ಹಾಗೆ ಎಸೆದು ಬಿಡುವುದು ಬಹಳ ದೊಡ್ಡ ದುರದೃಷ್ಟವಾಗಿದೆ ಮತ್ತು ಅಲ್ಲಾಹನ ಕೋಪಕ್ಕೆ ಗುರಿಯಾಗುವ ಕೆಲಸವಾಗಿದೆ. ಯಾರು ಅಲ್ಲಾಹನ ದೃಷ್ಟಾಂತಗಳನ್ನು ಗಮನಿಸುವುದಿಲ್ಲವೋ ಅವನು ನೆನಪಿಡಲಿ ಅವನನ್ನು ಅಲ್ಲಾಹನೂ ಗಮನಿಸಲಾರನು. ಅಲ್ಲಾಹನು ದೃಷ್ಟಾಂತಗಳನ್ನು ಪ್ರಕಟಿಸುವಾಗ ಬುದ್ಧಿಶಾಲಿಯೂ ದೇವಭಯವುಳ್ಳವನೂ ಆ ದೃಷ್ಟಾಂತವನ್ನು ಗುರುತಿಸುತ್ತಾನೆ ಮತ್ತು ಅದರಿಂದ ಲಾಭ ಪಡೆಯುತ್ತಾನೆ. ಆದರೆ ದೇವಭಯವಿರಿಸಿಕೊಂಡು ಅದರ ಬಗ್ಗೆ ಯೋಚಿಸದೆ ಇರುವ ಬುದ್ಧಿಹೀನನು ಅನುಗ್ರಹದಿಂದ ವಂಚಿತನಾಗುತ್ತಾನೆ.''

ನಮ್ಮ ಜಮಾಅತ್‌ಗೆ ಅಲ್ಲಾಹನು ಯಾವ ಕೊರತೆಯನ್ನೂ ಉಂಟುಮಾಡಿಲ್ಲ. ನಮ್ಮ ಜಮಾಅತಿನ ಯಾರೂ ಯಾರ ಮುಂದೆಯೂ ಲಜ್ಜಿತರಾಗಲಾರರು. ನಮ್ಮ ಜಮಾಅತಿನಲ್ಲಿ ಸೇರಿದವರಲ್ಲಿ ಯಾರೊಬ್ಬನೂ ಸಹ ''ನಾನು ಯಾವ ದೃಷ್ಟಾಂತವನ್ನೂ ಕಂಡಿಲ್ಲ'' ಎಂದು ಹೇಳಲಾರ.

ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ:

'ಬರಾಹೀನೆ ಅಹ್ಮದಿಯಾ' ಓದಿರಿ ಮತ್ತು ಅದರ ಬಗ್ಗೆ ಯೋಚಿಸಿರಿ. ಈ ಕಾಲಘಟ್ಟದ ಕುರಿತು ಎಲ್ಲಾ ಸಮಾಚಾರಗಳು ಅದರಲ್ಲಿವೆ. ಮಿತ್ರರ ಬಗ್ಗೆಯೂ ಶತ್ರುಗಳ ಬಗ್ಗೆಯೂ ಸಮಾಚಾರಗಳಿವೆ. ಮೂವತ್ತು ವರ್ಷಗಳ ಹಿಂದೆ, ಈ ಜಮಾಅತ್‌ನ ಹೆಸರು ಸಹ ಇಲ್ಲದ ಕಾಲದಲ್ಲಿ ನನ್ನ ಜೀವಿತದ ಬಗ್ಗೆ ನಾನು ಇಷ್ಟುಕಾಲ ಜೀವಿಸುವೆನೋ ಇಲ್ಲವೋ ಎಂಬುದರ ಬಗ್ಗೆ ತಿಳಿದಿರದ ಕಾಲದಲ್ಲಿ ಇಂತಹ ವೈಭವಶಾಲಿ ಭವಿಷ್ಯವಾಣಿಗಳನ್ನು ಪ್ರಕಟಿಸುವುದು ಮತ್ತು ಅವುಗಳು ಈಡೇರುವುದು ಮನುಷ್ಯನ ಸಾಮರ್ಥ್ಯಕ್ಕೆ ಸೇರಿದ ವಿಷಯವಾಗಿದೆಯೋ? ಒಂದಲ್ಲ, ಎರಡಲ್ಲ ಎಲ್ಲಾ ಭವಿಷ್ಯವಾಣಿಗಳೂ ಈಡೇರಿದವು. 'ಬರಾಹೀನೆ ಅಹ್ಮದಿಯಾ' ಅಹ್ಮದಿಯರ ಮನೆಗಳಲ್ಲಿ ಮಾತ್ರವಲ್ಲ ಕ್ರೈಸ್ತರ, ಹಿಂದುಗಳ ಮತ್ತು ಸರಕಾರದ ಬಳಿ ಸಹ ಇವೆ. ದೇವನ ಬಗ್ಗೆ ಭಯ ಮತ್ತು ಸತ್ಯದ ಬಗ್ಗೆ ಅನ್ವೇಷಣೆ ಮಾಡುವ ಮನಸ್ಸಿದ್ದರೆ 'ಬರಾಹೀನೆ ಅಹ್ಮದಿಯಾ'ದಲ್ಲಿರುವ ದೃಷ್ಟಾಂತಗಳ ಆಧಾರದಲ್ಲಿಯೇ ತೀರ್ಮ ಮಾಡಿಕೊಳ್ಳಿರಿ. ನೀವು ನೋಡಿರಿ. ಆಗ ನನ್ನ ಪರಿಚಯ ಯಾರಿಗೂ ಇರಲಿಲ್ಲ. ಇಲ್ಲಿಗೆ ಯಾರೂ ಬರುತ್ತಿರಲಿಲ್ಲ. ನನ್ನ ಜೊತೆ ಒಬ್ಬನೇ ಒಬ್ಬ ಸಹ ಇರಲಿಲ್ಲ. ಅಂತಹ ಕಾಲದಲ್ಲಿ ಈಗ ಇರುವ ಈ ಜಮಾಅತ್ ಬಗ್ಗೆ ಭವಿಷ್ಯವಾಣಿಗಳನ್ನು ಪ್ರಸ್ತಾಪಿಸಲಾಗಿತ್ತು. ಈ ಭವಿಷ್ಯವಾಣಿ ನನ್ನ ಯೋಚನೆಗೂ ಊಹೆಗೂ ಅನುಸಾರವಾಗಿರುತ್ತಿದ್ದರೆ ಇಲ್ಲಿ ಇಷ್ಟು ದೊಡ್ಡ ಜಮಾಅತ್ ಹೇಗೆ ಸ್ಥಾಪಿತವಾಯಿತು? ಖಾದಿಯಾನ್‌ನಿಂದ ಹೊರಗಿರುವ ಯಾರಿಗೂ ಪರಿಚಯವಿರದ ನನ್ನ ಬಗ್ಗೆ 'ಬರಾಹೀನೆ ಅಹ್ಮದಿಯಾ'ದಲ್ಲಿ ಹೀಗೆ ಹೇಳಲಾಗಿತ್ತು:

**ಫ ಹಾನ ಅನ್ ತುಆನ ವ ತುಅ್‌ರಫ ಬೈನನ್ನಾಸ್**

ಅರ್ಥ:- ನಿನಗೆ ಸಹಾಯ ನೀಡಲ್ಪಡುವ ಮತ್ತು ನೀನು ಜನರೆಡೆಯಲ್ಲಿ ಪ್ರಸಿದ್ಧನಾಗುವ ಕಾಲವು ಬಂದಿದೆ.

ಹಝ್‌ರತ್ ಖಲೀಫತುಲ್ ಮಸೀಹ್ ಹೇಳಿದರು: ಈಗ ಹಿಂದೂಸ್ಥಾನದಲ್ಲಿ ಮಾತ್ರವಲ್ಲ ಅರೇಬಿಯಾ, ಸಿರಿಯಾ, ಈಜಿಪ್ಟ್, ಯುರೋಪು, ಅಮೇರಿಕ, ಆಫ್ರಿಕದಲ್ಲೂ ಪ್ರಸಿದ್ಧಿ ಲಭಿಸಿದೆ. ಕೆಲವು ದಿನಗಳ ಹಿಂದೆ ಖಾದಿಯಾನ್‌ನಿಂದ ಮೂರು ದಿನಗಳ ತನಕ ಅರಬ್ ದೇಶಗಳಿಗೆ M.T.A. ಕಾರ್ಯಕ್ರಮಗಳು ಪ್ರಸಾರಗೊಂಡವು. ಅದರಿಂದ ಅರಬ್ ಲೋಕದಲ್ಲಿ ಕೋಲಾಹಲ ಉಂಟಾಗಿದೆ.

ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ನಾನು ಪ್ರಕಟಿಸಿದುದು ಅಲ್ಲಾಹನ ಸಂದೇಶವಾಣಿಗಳಲ್ಲವಾಗಿದ್ದರೆ ಅಲ್ಲಾಹನ ಇಚ್ಛೆಗೆ ವಿರುದ್ಧವಾಗಿ ಒಬ್ಬ ಸುಳ್ಳುವಾದಿಯ ಯೋಜನೆಗಳಾಗಿದ್ದರೆ ಅಲ್ಲಾಹನು ಅವನಿಗೆ ಸಹಾಯವನ್ನು ಏಕೆ ಮಾಡಿದನು? ಅವನಿಗೋಸ್ಕರ ಇಂತಹ ಸಾಮಾಗ್ರಿಗಳನ್ನೂ ಮಾರ್ಗಗಳನ್ನೂ ಏಕೆ ಒದಗಿಸಿಕೊಟ್ಟನು. ಇವುಗಳೆಲ್ಲಾ ನಾನೇ ಮಾಡಿದವುಗಳೇನು? ಅಲ್ಲಾಹನು ಸುಳ್ಳುವಾದಿಗಳಿಗೆ ಹೀಗೆ ಬೆಂಬಲ ನೀಡುತ್ತಾನಾದರೆ ಸಾತ್ವಿಕರ ಸತ್ಯದ ಮಟ್ಟ ಯಾವುದು? ನೀವೇ ಉತ್ತರ ನೀಡಿರಿ. ಸೂರ್ಯ ಚಂದ್ರರಿಗೆ ರಮಝಾನ್ ತಿಂಗಳಲ್ಲಿ ಗ್ರಹಣ ಹಿಡಿಯುವುದು ನನ್ನ ಶಕ್ತಿಗೆ ಸಾಧ್ಯವಿರುವ ಕೆಲಸವೇ? ನಾನು ವಾದಿಸಿದ ಕಾಲದಲ್ಲಿ ಅದು ಸಂಭವಿಸುವಂತೆ ಮಾಡುವುದು ನನಗೆ ಸಾಧ್ಯವೇ? ಹಝ್‌ರತ್ ಮುಹಮ್ಮದ್ ಸಲ್ಲಲ್ಲಾಹು

ಅಲೈಹಿವಸಲ್ಲಮರು ಅದನ್ನು ಸತ್ಯ ಮಹ್‌ದಿಯ ಚಿಹ್ನೆ ಎಂದು ಹೇಳಿದ್ದರು. ನಾನು ಮಹ್‌ದಿ ಎಂದು ವಾದಿಸಿದಾಗ ಅಲ್ಲಾಹನು ನನ್ನ ಸತ್ಯತೆಗೆ ದೃಷ್ಟಾಂತವಾಗಿ ಅದನ್ನು ತೋರಿಸಿದನು. ನಾನು ಅಲ್ಲಾಹನಿಂದ ಕಳುಹಿಸಲ್ಪಡದವನಾಗಿದ್ದರೆ ಅಲ್ಲಾಹನು ಈ ದೃಷ್ಟಾಂತ ಪ್ರಕಟಿಸಿ ಲೋಕದ ಜನರನ್ನು ದಾರಿತಪ್ಪಿಸಿದನೇ? ಇದಕ್ಕೆ ಉತ್ತರ ಯೋಚಿಸಿ ನೀಡಿರಿ – ನನ್ನನ್ನು ನಿರಾಕರಿಸಿದರೆ ಅದರ ಫಲ ಏನಾಗುವುದೆಂದು. ಅದು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮರನ್ನು ನಿರಾಕರಿಸಿದಂತೆ ಆಗುವುದು. ಮತ್ತು ಅಲ್ಲಾಹನನ್ನೂ ನಿರಾಕರಿಸಿದಂತೆ ಆಗುವುದು. ನನ್ನ ಸತ್ಯತೆಗೆ ಸಾಕ್ಷ್ಯಗಳಾಗಿ ಎಷ್ಟು ದೃಷ್ಟಾಂತಗಳಿವೆ ಎಂದರೆ ಅವುಗಳ ಸಂಖ್ಯೆ ಒಂದೆರಡಲ್ಲ ಸಾವಿರಾರು ಅಲ್ಲ ಲಕ್ಷಗಳನ್ನು ತಲಪಿವೆ. ನೀವು ಯಾವ್ಯಾವ ದೃಷ್ಟಾಂತಗಳನ್ನು ನಿರಾಕರಿಸುತ್ತಾ ಹೋಗುವಿರಿ?

'ಬರಾಹೀನೆ ಅಹ್ಮದಿಯಾ'ದಲ್ಲಿ ಬರೆದಿದೆ: **ಯಅ್‌ತೂನ ಮಿನ್ ಕುಲ್ಲಿ ಫಜ್ಜಿನ್ ಅಮೀಖ್** ವಾಹನ ಸಂಚಾರದಿಂದಾಗಿ ಕುಳಿಬಿದ್ದ ಮಾರ್ಗಗಳ ಮೂಲಕ ಜನರು ನಿನ್ನ ಬಳಿಗೆ ಆಗಮಿಸುವರು.

ಈಗ ನೀವು ಸ್ವತಃ ಇಲ್ಲಿಗೆ ಬಂದು ಒಂದು ದೃಷ್ಟಾಂತವನ್ನು ಈಡೇರಿಸಿರುವಿರಿ. ನೀವು ಇದನ್ನೂ ನಿರಾಕರಿಸುವಿರೇನು. ನೀವು ಇಲ್ಲಿಗೆ ಆಗಮಿಸಿ ಒಂದು ದೃಷ್ಟಾಂತವನ್ನು ಈಡೇರಿಸಿರುವಿರಿ. ಇದನ್ನು ಅಳಿಸಿಬಿಡಲು ಸಾಧ್ಯವಿದ್ದರೆ ಅಳಿಸಿಬಿಡಿರಿ. ನಾನು ಪುನಃ ಹೇಳುತ್ತೇನೆ. ಅಲ್ಲಾಹನ ದೃಷ್ಟಾಂತಗಳನ್ನು ಸುಳ್ಳೆಂದು ಹೇಳುವುದು ಒಳ್ಳೆಯ ಕೆಲಸವಲ್ಲ. ಹಾಗೆ ಮಾಡಿದರೆ ಅಲ್ಲಾಹನ ಕೋಪವು ಪ್ರಕಟವಾಗುತ್ತದೆ. ನನ್ನ ಮನಸ್ಸಿನಲ್ಲಿರುವುದನ್ನು ನಾನು ಹೇಳಿದೆ. ನಂಬುವುದು ನಂಬದಿರುವುದು ನಿಮ್ಮ ನಿರ್ಧಾರಕ್ಕೆ ಸೇರಿದೆ. ನಾನು ಸತ್ಯವಂತನೆಂದೂ ನಾನು ಅವನ ಕಡೆಯಿಂದ ಬಂದವನೆಂದೂ ಅಲ್ಲಾಹನು ಚೆನ್ನಾಗಿ ಬಲ್ಲನು.

ರೋಗವು ಗುಣವಾದ ಬಗ್ಗೆ ಕೆಲವು ದೃಷ್ಟಾಂತಗಳಿವೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿದರು:

ಮಾಲೇರ್ ಕೋಟ್ಲದ ನವಾಬ್ ಮುಹಮ್ಮದ್ ಅಲಿ ಖಾನ್ ಸಾಹೇಬರ ಪುತ್ರ ಅಬ್ದುರ್ರಹೀಮ್ ಕಠಿಣವಾದ ಜ್ವರದಿಂದ ಪೀಡಿತನಾಗಿದ್ದನು. ಅವನು ಆ ರೋಗದಿಂದ ಗುಣ ಹೊಂದುವ ಹಾಗೆ ಕಾಣಿಸುತ್ತಿರಲಿಲ್ಲ. ಅವನು ಮೃತನಾಗಿರುವ ಹಾಗೆ ಕಾಣಿಸುತ್ತಿದ್ದನು. ಆಗ ನಾನು ಅವನಿಗೋಸ್ಕರ ಪ್ರಾರ್ಥಿಸಿದಾಗ ಅವನು ಮರಣ ಹೊಂದುವನು ಎಂಬಂತೆ ನನಗೆ ತಿಳಿಸಲಾಯಿತು. ಆಗ ನಾನು ಅಲ್ಲಾಹನೊಂದಿಗೆ ಬೇಡಿಕೊಂಡೆ– **ಓ ಅಲ್ಲಾಹ್ ನಾನು ಅವನಿಗೋಸ್ಕರ ಶಿಫಾರಸು ಮಾಡುತ್ತೇನೆ**. ಆಗ ನನಗೆ ಅಲ್ಲಾಹನು ತಿಳಿಸಿದನು:

**ಮನ್‌ಝುಲ್ಲಝೀ ಯಶ್‌ಫಉ ಇಂದಹೂ ಇಲ್ಲಾ ಬಿ ಇಝ್‌ನಿಹೀ**

ಅವನ ಸನ್ನಿಧಿಯಲ್ಲಿ ಅವನ ಅನುಮತಿ ಇಲ್ಲದೆ ಶಿಫಾರಸು ಮಾಡಬಲ್ಲವನು ಯಾರು? ಆಗ ನಾನು ಮೌನವಾದೆ. ಕೂಡಲೇ, ಹೆಚ್ಚಿಗೆ ತಡವಾಗದೆ ಪುನಃ ನನಗೆ ಅಲ್ಲಾಹನು ತಿಳಿಸಿದನು.

**ಇನ್ನಕ ಅಂತಲ್ ಮಜಾಝ್**

ನಿಶ್ಚಯವಾಗಿಯೂ ನಿನಗೆ ಅನುಮತಿ ನೀಡಲಾಗಿದೆ.

ಆಗ ನಾನು ಬಹಳ ನೊಂದು ಅಳುತ್ತಾ ಪ್ರಾರ್ಥಿಸಿದೆ. ಅಲ್ಲಾಹನು ನನ್ನ ಪ್ರಾರ್ಥನೆ ಅಂಗೀಕರಿಸಿದನು. ಆ ಹುಡುಗ ಗೋರಿಯಿಂದ ಎದ್ದು ಬಂದವನಂತೆ ಕಾಣಿಸಿದನು. ಅವನು ರೋಗಮುಕ್ತನಾದನು. ಅವನು ಎಷ್ಟು ಬಲಹೀನವಾಗಿದ್ದನೆಂದರೆ ದೀರ್ಘಕಾಲದ ನಂತರ ಅವನ ಶರೀರ ಬಲಿಷ್ಟವಾಯಿತು.

ಶತ್ರುಗಳ ನಾಶದ ಬಗ್ಗೆ ದೃಷ್ಟಾಂತಗಳಿವೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೀಗೆ ಬರೆಯುತ್ತಾರೆ.

ಎಪ್ಪತ್ತೊಂದನೆಯ ದೃಷ್ಟಾಂತದ ಬಗ್ಗೆ ಸಿರ್‍ರುಲ್ ಖಿಲಾಫ ಎಂಬ ಪುಸ್ತಕದ 62ನೇ ಪುಟದಲ್ಲಿ ನಾನು ಹೀಗೆ ಬರೆದಿರುವೆನು. ಸನ್ಮಾರ್ಗದ ಬಾಗಿಲು ಮುಚ್ಚಲ್ಪಟ್ಟಿರುವಂತಹ ಶತ್ರುಗಳ ಮೇಲೆ ಪ್ಲೇಗ್ ರೋಗ ಬಂದೆರಗಲಿ ಎಂದು ನಾನು ಪ್ರಾರ್ಥಿಸಿದ್ದೆ. ಕೆಲವು ವರ್ಷಗಳ ನಂತರ ಈ ದೇಶದಲ್ಲಿ ಪ್ಲೇಗ್ ರೋಗದ ಹಾವಳಿ ತಲೆದೋರಿತು. ಕೆಲವು ಕಠಿಣ ಶತ್ರುಗಳು ಮೃತರಾದರು. ಅನಂತರ ನನಗೆ ಫಾರಸೀ ಭಾಷೆಯಲ್ಲಿ ಹೀಗೆ ಇಲ್‌ಹಾಮ್ ಲಭಿಸಿತು.

ಅರ್ಥ: **ನೀನು ಅನೇಕ ಶತ್ರುಗಳ ಮನೆಗಳನ್ನು ಜನರಹಿತವಾಗಿ ಮಾಡಿದೆ**.

ಈ ಭವಿಷ್ಯವಾಣಿ ಪ್ರಕಾರ ಪ್ಲೇಗ್ ರೋಗ ಬೆಂಕಿಯ ಹಾಗೆ ವ್ಯಾಪಿಸಿ ನನ್ನನ್ನು ಸುಳ್ಳುವಾದಿ ಎಂದು ಹೇಳಿ ನಿಂದಿಸುತ್ತಿದ್ದ ಹಲವು ಸಾವಿರ ಶತ್ರುಗಳು ನಾಶವಾದರು. ಅವರಲ್ಲಿ ಕೆಲವರ ಬಗ್ಗೆ ವಿವರಿಸತ್ತೇನೆ. ಮೊದಲು ಮೌಲವಿ ರುಸುಲ್ ಬಾಬ ಬಗ್ಗೆ ಬರೆಯುತ್ತೇನೆ. ಅಮೃತಸರದ ನಿವಾಸಿಯಾದ ಅವರು ನನ್ನ ವಿರುದ್ಧ ಪುಸ್ತಕ ಬರೆದಿದ್ದರು. ಅವರು ಬಹಳ ತೀವ್ರವಾಗಿ ನಿಂದಿಸಿ ಬರೆದಿದ್ದರು. ಇಹಲೋಕದ ಈ ಸ್ವಲ್ಪ ಕಾಲದ ಜೀವಿತವನ್ನು ಪ್ರೀತಿಸಿ ಸುಳ್ಳು ಬರೆದಿದ್ದರು. ಅಲ್ಲಾಹನ ವಾಗ್ದಾನ ಪ್ರಕಾರ ಪ್ಲೇಗ್ ರೋಗಕ್ಕೆ ತುತ್ತಾಗಿ ಮೃತರಾದರು. ಇನ್ನೊಬ್ಬ ಮುಹಮ್ಮದ್ ಬಖ್ಶ್ ಎಂಬ ಬಟಾಲದ ಡಿಪ್ಯುಟಿ ಇನ್ಸ್‌ಪೆಕ್ಟರ್. ಅವರು ಹಗೆತನ ಮತ್ತು ಕಷ್ಟ ನೀಡುವುದರಲ್ಲಿ ಆಸಕ್ತರಾಗಿದ್ದರು. ಆ ವ್ಯಕ್ತಿ ಸಹ ಪ್ಲೇಗ್‌ನಿಂದ ಮರಣಹೊಂದಿದರು. ಇನ್ನೊಬ್ಬ ಜಮ್ಮು ನಿವಾಸಿ ಚಿರಾಗ್ ದೀನ್ ಎಂಬ ವ್ಯಕ್ತಿ. ಆತನು ತಾನು ಸಂದೇಶವಾಹಕನೆಂದು ವಾದಿಸಿದ್ದನು. ನನ್ನನ್ನು ದಜ್ಜಾಲ್ ಎಂದು ಕರೆದಿದ್ದನು. ಅವನಿಗೆ ಹಝ್ರತ್ ಈಸಾ ಕನಸಿನಲ್ಲಿ ಒಂದು ಬೆತ್ತವನ್ನು ನೀಡಿದರಂತೆ. ದಜ್ಜಾಲನಾದ ನನ್ನನ್ನು ಕೊಲ್ಲಲು. ಅವನ ಬಗ್ಗೆ ನನ್ನ ಪುಸ್ತಕ "ದಾಫಿಉಲ್ ಬಲಾ ವ ಮಿಅ್ ಯಾರೆ ಅಹ್ಲುಲ್ ಇಸ್‌ತಿಫಾ" ದಲ್ಲಿ ಬರೆದಂತೆ ನನ್ನ ಭವಿಷ್ಯವಾಣಿ ಪ್ರಕಾರ 1906 ಎಪ್ರಿಲ್ ದಿನಾಂಕ 4ರಂದು ತನ್ನ ಇಬ್ಬರು ಮಕ್ಕಳೊಂದಿಗೆ ಪ್ಲೇಗ್‌ನಿಂದ ನಾಶವಾದನು. ನನ್ನನ್ನು ಕೊಲ್ಲಲು ಉಪಯೋಗಿಸಬೇಕಾಗಿದ್ದ ಈಸಾರ ಬೆತ್ತ ಎಲ್ಲಿಗೆ ಹೋಯಿತು? 'ಇನ್ನೀ ಲಮಿನಲ್ ಮುರ್‌ಸಲೀನ್'– ನಾನು ಸಂದೇಶವಾಹಕರಲ್ಲಿ ಒಬ್ಬನಾಗಿರುವೆ ಎಂಬ ಆತನಿಗೆ ಲಭಿಸಿದ್ದೆಂದು ಹೇಳಲಾದ ಇಲ್‌ಹಾಮಿನ ಗತಿ

ಏನಾಯಿತು. ಖೇದಕರವಾದುದೇನೆಂದರೆ ಬಹಳ ಜನರು ತಮ್ಮ ಆತ್ಮ ಪರಿಶುದ್ಧಿ ಮಾಡಿಕೊಳ್ಳದೆ ತಮ್ಮ ಯೋಚನೆಗಳನ್ನೇ ಇಲ್‌ಹಾಮ್ ಎಂದು ಭಾವಿಸುತ್ತಾರೆ. ಅಂತಹ ಜನರು ಕೊನೆಗೆ ಬಹಳ ಅಪಮಾನಕರವಾದ ರೀತಿಯಲ್ಲಿ ಸಾಯುತ್ತಾರೆ.

ಮೇಲೆ ವಿವರಿಸಿದವರಲ್ಲದೆ ಇನ್ನೂ ಕೆಲವರು ಕಷ್ಟನೀಡುವುದರಲ್ಲಿ ಮತ್ತು ಅಪಮಾನಿಸುವುದರಲ್ಲಿ ಮುಂದುವರಿದಿದ್ದರು. ಅವರು ಅಲ್ಲಾಹನ ಶಿಕ್ಷೆಯ ಬಗ್ಗೆ ಹೆದರುತ್ತಿರಲಿಲ್ಲ. ಅವರು ನನ್ನನ್ನು ಅಪಹಾಸ್ಯ ಮಾಡುತ್ತಾ ಬೈಯ್ಯುತ್ತಾ ಇದ್ದರು. ಅವರೆಲ್ಲರೂ ಪ್ಲೇಗ್ ರೋಗ ಬಾಧಿಸಿ ಸತ್ತರು.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: "ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮರ ಕಳೆದು ಹೋದ ಶ್ರೇಷ್ಠತೆಯನ್ನು ಪುನಃ ಸ್ಥಾಪಿಸಲು ಹಾಗೂ ಪವಿತ್ರ ಖುರ್‌ಆನಿನ ಸತ್ಯತೆಯನ್ನು ಲೋಕಕ್ಕೆ ತೋರಿಸಲು ನನ್ನನ್ನು ಅಲ್ಲಾಹನು ಕಳುಹಿಸಿರುವನು." ಈ ಎಲ್ಲಾ ಕೆಲಸಗಳು ಈಗ ನಡೆಯುತ್ತಾ ಇವೆ. ಆದರೆ ಯಾರ ಕಣ್ಣುಗಳಿಗೆ ಪಟ್ಟಿಕಟ್ಟಲಾಗಿದೆಯೋ ಅವರು ಅದನ್ನು ಕಾಣಲಾರರು. ಈಗ ಈ ಸಂಘಟನೆ ಸೂರ್ಯನಂತೆ ಬೆಳಗುತ್ತಿದೆ. ಅಲ್ಲಾಹನ ದೃಷ್ಟಾಂತಗಳಿಗೆ ಸಾಕ್ಷಿಯಾದವರು ಎಷ್ಟು ಬೃಹತ್ ಸಂಖ್ಯೆಯಲ್ಲಿದ್ದಾರೆಂದರೆ ಅವರನ್ನು ಒಂದು ಸ್ಥಳದಲ್ಲಿ ಜಮಾಯಿಸಿದರೆ ಯಾವುದೇ ಅರಸನ ಸೈನ್ಯ ಇಷ್ಟು ಬೃಹತ್ತಾದ ಸಂಖ್ಯೆಯ ಜನರನ್ನು ಹೊಂದಿರಲಾರದು.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಮತ್ತೊಂದೆಡೆ ಹೀಗೆ ಹೇಳುತ್ತಾರೆ:

"ನನ್ನನ್ನು ಸುಧಾರಕನನ್ನಾಗಿ ಮಾಡಿ ಅಲ್ಲಾಹನು ಕಳುಹಿಸಿರುವನು. ನನ್ನ ಮೂಲಕ ಎಂತಹ ದೃಷ್ಟಾಂತಗಳನ್ನು ಅಲ್ಲಾಹನು ತೋರಿಸಿದ್ದಾನೆಂದರೆ ದ್ವೇಷರಹಿತರಾದ ದೇವಭಯ ಹೊಂದಿದ ಬುದ್ಧಿಶಾಲಿಗಳಾದ ಜನರು ಆ ದೃಷ್ಟಾಂತಗಳಿಂದ ಇಸ್ಲಾಮ್ ಧರ್ಮದ ಸತ್ಯತೆಯನ್ನು ಚೆನ್ನಾಗಿ ಮನವರಿಕೆ ಮಾಡಿಕೊಳ್ಳಬಹುದಾಗಿದೆ. ಆ ದೃಷ್ಟಾಂತಗಳು ಸಾವಿರಾರು ಸಂಖ್ಯೆಗಳಲ್ಲಿವೆ. ಅವುಗಳಲ್ಲಿ ಕೆಲವನ್ನು ನಮ್ಮ ಪುಸ್ತಕ 'ಹಖೀಖತುಲ್ ವಹೀ'ಯಲ್ಲಿ ಬರೆಯಲಾಗಿದೆ. ಹಿಜರಿ ಹದಿಮೂರನೆಯ ಶತಮಾನ ಕೊನೆಗೊಂಡಾಗ ಹದಿನಾಲ್ಕನೆಯ ಶತಮಾನದ ಆರಂಭದಲ್ಲಿ ನನ್ನನ್ನು ಅಲ್ಲಾಹನು ಮಹ್‌ದೀ ಮಸೀಹ್ ಆಗಿ ನೇಮಿಸಿ ಕಳುಹಿಸಿದನು. ಆದಮ್‌ರಿಂದ ಮೊದಲುಗೊಂಡು ಕೊನೆಯ ತನಕ ಎಲ್ಲಾ ಪ್ರವಾದಿಗಳ ಹೆಸರುಗಳನ್ನು ನನಗೆ ಇರಿಸಿದನು. ಕೊನೆಯದಾಗಿ ವಾಗ್ದತ್ತ ಈಸಾ, ಅಹ್ಮದ್ ಮತ್ತು ವಾಗ್ದತ್ತ ಮುಹಮ್ಮದ್ ಎಂದು ಹೆಸರು ನೀಡಿದನು. ಆ ಎರಡು ಹೆಸರುಗಳಿಂದ ಪದೇ ಪದೇ ನನ್ನನ್ನು ಕರೆದನು. ಈ ಎರಡು ಹೆಸರುಗಳನ್ನೂ ಬೇರೆ ಶಬ್ದಗಳಲ್ಲಿ ಮಸೀಹ್ ಮತ್ತು ಮಹ್‌ದಿ ಎಂದು ವಿವರಿಸಲಾಗಿದೆ. ನನಗೆ ನೀಡಲಾದ ದೃಷ್ಟಾಂತಗಳಲ್ಲಿ ಕೆಲವು ಭವಿಷ್ಯವಾಣಿಗಳಾಗಿವೆ. ಅವುಗಳಲ್ಲಿ ಬಹಳ ಹಿರಿದಾದ ಅದೃಶ್ಯ ಸಮಾಚಾರಗಳಿವೆ. ಅಲ್ಲಾಹನ ಹೊರತು ಬೇರೆ ಯಾರಿಗೂ ತಿಳಿಸಲು ಸಾಧ್ಯವಾಗದಂತಹ ಭವಿಷ್ಯವಾಣಿಗಳು. ಕೆಲವು ಪ್ರಾರ್ಥನೆಗಳು ಅಂಗೀಕರಿಸಲ್ಪಟ್ಟ ಬಗ್ಗೆ ನನಗೆ ತಿಳಿಸಲಾಯಿತು. ಮತ್ತೆ ಕೆಲವು ಶತ್ರುಗಳ ವಿರುದ್ಧವಾಗಿ ಮಾಡಿದ ಪ್ರಾರ್ಥನೆಗಳು ಅಂಗೀಕರಿಸಲ್ಪಟ್ಟವು ಹಾಗೂ ಶತ್ರುಗಳು ನಾಶವಾದರು. ಕೆಲವು ದುಆಗಳು ಶಿಫಾರಸು ರೂಪದಲ್ಲಿದ್ದುವು. ಅವುಗಳು ಸಾಮಾನ್ಯ ಪ್ರಾರ್ಥನೆಗಿಂತ ಉನ್ನತ ಸ್ಥಾನದಲ್ಲಿವೆ. ಮತ್ತೆ ಕೆಲವು ದುಆಗಳು ಮುಬಾಹಲ(ಪ್ರಾರ್ಥನಾ ಸಮರ) ರೂಪದಲ್ಲಿವೆ. ಅವುಗಳ ಪರಿಣಾಮವಾಗಿ ಅಲ್ಲಾಹನು ಶತ್ರುಗಳನ್ನು ಹೀನಾಯಗೊಳಿಸಿ ನಾಶಗೊಳಿಸಿದನು. ಮತ್ತೆ ಕೆಲವು ಸಜ್ಜನರಾದ ಮಹಾನುಭಾವರು ಅಲ್ಲಾಹನಿಂದ ಇಲ್‌ಹಾಮ್ ಲಭಿಸಿದ ಕಾರಣ ನನ್ನ ಸತ್ಯತೆ ಬಗ್ಗೆ ಸಾಕ್ಷ್ಯ ಹೇಳಿದರು. ಕೆಲವು ಸಾತ್ವಿಕರಾದ ಮಹಾನುಭಾವರು ನಾನು ನಿಯೋಗಿಸಲ್ಪಡುವ ಮೊದಲೇ ನನ್ನ ಬಗ್ಗೆ ಸಾಕ್ಷ್ಯ ಹೇಳಿ ಮೃತರಾಗಿರುವರು. ಅವರು ನನ್ನ ಹೆಸರು, ನನ್ನ ಗ್ರಾಮದ ಹೆಸರು ಸಹ ಹೇಳಿದ್ದರು. ವಾಗ್ದತ್ತ ಮಸೀಹ್ ಬೇಗನೆ ಆಗಮಿಸುವರು ಎಂದು ಸಹ ಹೇಳಿದ್ದರು. ಕೆಲವರು ನಾನು ಜನಿಸುವ ಮೊದಲೇ ನನ್ನ ಬಗ್ಗೆ ಹೇಳಿದ್ದರು. ಮತ್ತೆ ಕೆಲವರು ನನ್ನ ಪ್ರಾಯ ಹತ್ತು ಹನ್ನೆರಡು ಆಗಿದ್ದಾಗ ನಾನು ಮಸೀಹ್ ಮೌಊದ್ ಆಗಿ ಆಗಮಿಸುವ ಬಗ್ಗೆ ತಮ್ಮ ಶಿಷ್ಯರೊಂದಿಗೆ 'ನೀವು ಮಸೀಹ್ ಮೌಊದರನ್ನು ಕಾಣುವಿರಿ' ಎಂದು ಹೇಳಿದ್ದರು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮರು ಮಹ್‌ದೀ ಮಸೀಹರ ಕಾಲದ ಬಗ್ಗೆ ಹೇಳಿದ ಚಿಹ್ನೆಗಳು ರಮಝಾನ್‌ನ ಸೂರ್ಯ ಚಂದ್ರ ಗ್ರಹಣ, ಪ್ಲೇಗ್ ರೋಗ ಹಬ್ಬುವುದು ಮೊದಲಾದವು ನನಗೆ ಸಾಕ್ಷ್ಯವಾಗಿ ಈಡೇರಿವೆ. ಈಗ ಹದಿನಾಲ್ಕನೆಯ ಶತಮಾನದ ನಾಲ್ಕನೆಯ ಒಂದು ಭಾಗ ದಾಟಿ ಹೋಗಿದೆ. ನನ್ನ ಸತ್ಯತೆಗೆ ಎಷ್ಟು ಸಾಕ್ಷ್ಯಗಳೂ ಸಾಕ್ಷ್ಯಾಧಾರಗಳೂ ಇವೆ ಎಂದರೆ ಅವುಗಳೆನ್ನೆಲ್ಲಾ ಬರೆದರೆ ಸಾವಿರಾರು ಪುಟಗಳಲ್ಲಿ ಬರೆದರೂ ಅವು ಮುಗಿಯಲಾರವು."

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಕಾಲದಲ್ಲಿ ಜನರಿಗೆ ಅಲ್ಲಾಹನು ಹೇಗೆ ಮಾರ್ಗದರ್ಶನ ನೀಡಿದನೆಂಬುದರ ಬಗ್ಗೆ ಕೆಲವು ಸಂಭವಗಳನ್ನು ವಿವರಿಸುತ್ತೇನೆಂದು ಹುಝೂರ್ ಹೇಳಿದರು:–

ಹಝ್ರತ್ ಶೇಖ್ ಮುಹಮ್ಮದ್ ಅಫ್‌ಝುಲ್ ಸಾಹೇಬರು ಹೇಳುತ್ತಾರೆ: ನನ್ನ ದೊಡ್ಡಪ್ಪ ಹಕೀಮ್ ಶೇಖ್ ಇಬಾದುಲ್ಲಾ ಮತ್ತು ನನ್ನ ದೊಡ್ಡಪ್ಪನ ಮಗ ಶೇಖ್ ಕರಮ್ ಇಲಾಹಿ ಅಹ್ಮದಿಯಯಾಗಿದ್ದರು. ಆದರೆ ನಾನು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ನೋಡಿರಲಿಲ್ಲ ಅವರ ಫೋಟೋ ಸಹ ನೋಡಿರಲಿಲ್ಲ. ನನ್ನ ಪ್ರಾಯ 12 ವರ್ಷವಾದಾಗ ನಾನೊಂದು ಸ್ವಪ್ನ ಕಂಡೆನು. ಅದರಲ್ಲಿ ನನ್ನ ದೇಹದಿಂದ ಜೀವ ಹೊರಟುಹೋಗಿವೆ. ಆದರೆ ಕಣ್ಣು ನೋಡುವ ಶಕ್ತಿ ಮತ್ತು ಮೆದುಳು ಚಿಂತಿಸುವ ಶಕ್ತಿ ಹೊಂದಿರುವುದಾಗಿ ಕಂಡೆನು. ಒಬ್ಬ ಹಿರಿಯ ವ್ಯಕ್ತಿ ನನ್ನ ಎದುರು ಕುಳಿತುಕೊಂಡಿದ್ದಾರೆ. ಅವರ ಹಿಂದೆ ಇನ್ನೊಬ್ಬ ಹಿರಿಯರು ಕುಳಿತಿದ್ದಾರೆ. ಅವರ ಕಾಲುಗಳು ಮಾತ್ರ ಕಾಣುತ್ತವೆ. ತನ್ನ ಮುಂದೆ ಕುಳಿತುಕೊಂಡವರು ಹಝ್ರತ್ ಮಿರ್ಝಾ ಸಾಹೇಬರೆಂದೂ ಅವರ ಹಿಂದೆ ಕುಳಿತಿರುವವರ ಕಾಲುಗಳು ಮಾತ್ರ ಕಾಣಿಸುತ್ತಿದ್ದು ಅವರು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮರೆಂದು ನನಗೆ ತಿಳಿಸಲಾಯಿತು. ನಾನು ಎಚ್ಚರಗೊಂಡೆನು. ಮರುದಿನ ಬೆಳಿಗ್ಗೆ ನಾನು ಮುರ್ತಝಾ ಖಾನರೊಂದಿಗೆ ನನ್ನ ಸ್ವಪ್ನದ ವ್ಯಾಖ್ಯಾನ ಕೇಳಿದೆ. ಅವರು ಹೇಳಿದರು – ನೀವು ಮಿರ್ಝಾ ಸಾಹೇಬರ ಮೂಲಕ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮರನ್ನು ಅನುಸರಿಸುವಿರಿ. ನಾನು ಅಲ್ಲಾಹನ ನಾಮದಲ್ಲಿ ಪ್ರಮಾಣ ಮಾಡಿ ಹೇಳುತ್ತೇನೆ – ನಾನು 1905ರಲ್ಲಿ ಬೈಅತ್ ಮಾಡಿದಾಗ ಹಝ್ರತ್

ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ಕಂಡಾಗ ಅವರು ನಾನು ಕನಸಿನಲ್ಲಿ ಕಂಡ ಅದೇ ಹಿರಿಯ ವ್ಯಕ್ತಿ ಎಂದು ನನಗೆ ಮನವರಿಕೆಯಾಯಿತು.

ಈರೀತಿ ಅಲ್ಲಾಹನು ತಾನು ಇಚ್ಛಿಸುವವರಿಗೆ ನೇರಮಾರ್ಗ ತೋರಿಸುತ್ತಾನೆ.

ಹಝ್ರತ್ ಖಲೀಫತುಲ್ ಮಸೀಹ್ ಹೇಳಿದರು: ಇಂದಿನ ಕಾಲದಲ್ಲಿ ಸಹ ಅಲ್ಲಾಹನು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಸತ್ಯತೆಗೆ ದೃಷ್ಟಾಂತಗಳನ್ನು ತೋರಿಸುತ್ತಾನೆ. ಸಾವಿರಾರು ಮೈಲು ದೂರವಿರುವವರು ಸಹ ಇದರ ಬಗ್ಗೆ ಸಾಕ್ಷ್ಯ ಹೇಳುತ್ತಾರೆ. ಅಲ್ಲಾಹನು ಹೇಗೆ ಮಾರ್ಗದರ್ಶನ ನೀಡಿದನೆಂದು ವಿವರಿಸುತ್ತಾರೆ. ಕೆಲವು ಸಂಭವಗಳನ್ನು ವಿವರಿಸುತ್ತೇನೆ. ಮಾಲಿ ದೇಶದ ಬಾಲ ಎಂಬಲ್ಲಿ ತೀಜಾನಿಯ ಪಂಗಡದ ದೊಡ್ಡ ಇಮಾಮ್ ಇದ್ದಾರೆ. ಅವರ ತಂದೆಯವರ ಮುಖಾಂತರ 93 ಗ್ರಾಮಗಳ ನಿವಾಸಿಗಳು ಮುಸ್ಲಿಮರಾಗಿದ್ದರು. ತಂದೆಯವರ ನಿಧನದ ಬಳಿಕ ಇವರು ಉತ್ತರಾಧಿಕಾರಿಯಾದರು. ಅಲ್ಲಾಹನ ಅನುಗ್ರಹದಿಂದ ಅವರು ಈಗ ಅಹ್ಮದಿ ಆಗಿದ್ದಾರೆ. ಅವರು ಒಂದು ಸ್ವಪ್ನವನ್ನು ಕಂಡರು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಮನೆಗೆ ಬಂದು ಅವರ ಕೋಣೆಯಲ್ಲಿ ಅವರ ಜೊತೆಗೆ ಕುಳಿತರು. ಮನೆಯ ಹೊರಗೆ ಅನೇಕ ವಿದ್ವಾಂಸರು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ಭೇಟಿಯಾಗಲು ಕಾಯುತ್ತಾ ಇದ್ದಾರೆ. ಆಗ ಇಮಾಮ್ ಸಾಹೇಬರು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾರೊಂದಿಗೆ ಹೊರಗೆ ಅನೇಕ ವಿದ್ವಾಂಸರು ಅವರನ್ನು ಕಾಯುತ್ತಾ ಇರುವುದಾಗಿ ಹೇಳಿದರು. ಆಗ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೊರಗೆ ಬಂದು ಅಲ್ಲಿದ್ದ ಎಲ್ಲಾ ಆಲಿಮರ(ವಿದ್ವಾಂಸರ) ತಲೆಗಳಿಂದ ಟೊಪ್ಪಿಗಳನ್ನು ತೆಗೆದರು. ಕೇವಲ ಇಮಾಮ್ ಸಾಹೇಬರ ತಲೆಯಿಂದ ಟೊಪ್ಪಿ ತೆಗೆಯಲಿಲ್ಲ.

ಅಹ್ಮದಿಯಾದ ನಂತರ ಇಮಾಮ್ ಸಾಹೇಬರು ಅಲ್ಲಿರುವ ನಮ್ಮ ಮುಅಲ್ಲಿಮರೊಂದಿಗೆ ತನ್ನ ಶಿಷ್ಯಂದಿರು ಇರುವ ಗ್ರಾಮಗಳಿಗೆ ಹೋಗಿ ತಬ್ಲೀಗ್ ಮಾಡುತ್ತಿದ್ದಾರೆ. ಅಲ್ಲಾಹನ ಅನುಗ್ರಹದಿಂದ ಇಷ್ಟರವರೆಗೆ 40 ಗ್ರಾಮಗಳ ಜನರು ಅಹ್ಮದಿಯಾ ಜಮಾಅತಿಗೆ ಸೇರಿದ್ದಾರೆ.

ಬುರ್ಕಿನಫಾಸೋ ದೇಶದ ಜಿಯಾರಾ ಬುಖಾರಿ ಎಂಬವರು ಆ ದೇಶದಲ್ಲಿರುವ ನಮ್ಮ ರೇಡಿಯೋ ಸ್ಟೇಶನಿಗೆ ಫೋನ್ ಮಾಡಿದರು. ಅಲ್ಲಿ ನಮ್ಮ ವಿವಿಧ ರೇಡಿಯೋ ಸ್ಟೇಶನ್‌ಗಳು ಕಾರ್ಯನಿರತವಾಗಿವೆ. ಅವರು ಹೇಳಿದರು: ನಾನು ತಮ್ಮ ತಬ್‌ಲೀಗ್ ಆಲಿಸಿದೆ. ಆಗಮಿಸಿದ ಇಮಾಮ್ ಮಹ್‌ದೀ ಸತ್ಯವಂತರೋ ಅಲ್ಲವೋ ಎಂದು ತಿಳಿಯಲು ಇಸ್ತಿಖಾರ ಪ್ರಾರ್ಥನೆ ಮಾಡಲು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿದ ಪ್ರಕಾರ ನಾನು ಇಸ್ತಿಖಾರ ಪ್ರಾರ್ಥನೆ ಮಾಡಲು ಪ್ರಾರಂಭಿಸಿದೆ. ಒಂದು ವಾರ ಕಳೆದಾಗ ನಾನೊಂದು ಸ್ವಪ್ನ ಕಂಡೆನು. ಒಂದು ಟೆಂಟ್ ಒಳಗೆ ಇಬ್ಬರು ಪ್ರಕಾಶಭರಿತ ಮಾಹಾನುಭಾವರನ್ನು ಕಂಡೆನು. ಕನಸಿನಲ್ಲಿ ಅವರ ಸ್ನೇಹಿತ ಹೇಳಿದರು ಬಲಭಾಗದಲ್ಲಿರುವವರು ಇಮಾಮ್ ಮಹ್‌ದೀ ಎಂದು. ಇನ್ನೊಬ್ಬರು ಯಾರೆಂದು ತಿಳಿಯಲಿಲ್ಲ. ಈ ಸ್ವಪ್ನ ಕಂಡನಂತರ ಆಗಮಿಸಿದ ಇಮಾಮ್ ಮಹ್‌ದೀ ಸತ್ಯವಾದಿ ಎಂದು ನನಗೆ ಸ್ಪಷ್ಟವಾಯಿತು. ಅವರು ಸತ್ಯವಾದಿ ಅಲ್ಲವಾಗಿದ್ದರೆ ನನ್ನ ಕನಸಿನಲ್ಲಿ ಅವರು ಕಾಣಿಸಿಕೊಂಡದ್ದು ಹೇಗೆ? ಆದುದರಿಂದ ನಾನು ಬೈಅತ್ ಮಾಡಿದೆ.

ಈಜಿಪ್ಟ್‌ನಿಂದ ಒಬ್ಬ ಮಹಿಳೆ ಬರೆಯುತ್ತಾರೆ. ಅಲ್ಲಾಹನು ತನ್ನ ಅನುಗ್ರಹದಿಂದ ನನಗೆ ಕೆಲವು ಒಳಿತುಗಳನ್ನು ನೀಡಿರುವನು. ನಾನು ಸ್ವಪ್ನದಲ್ಲಿ ಹಝ್ರತ್ ಮಿರ್ಝಾ ಗುಲಾಮ್ ಅಹ್ಮದ್ ಅಲೈಹಿಸ್ಸಲಾಮರನ್ನು ಮತ್ತು ಖಲೀಫರಾದ ನಿಮ್ಮನ್ನು ಕಂಡೆನು. ಅಲ್ಲಾಹನಾಣೆ ಈಗ ಲೋಕದಲ್ಲಿ ಒಬ್ಬ ಖಲೀಫರು ಇರುವುದು ನನಗೆ ತಿಳಿದಿರಲಿಲ್ಲ. ನಾನು ಇಸ್ತಿಖಾರ ಪ್ರಾರ್ಥನೆ ಮಾಡುತ್ತಾ ಇದ್ದೆ ಆಗ ಅಲ್ಲಾಹನು ನನಗೆ ಈ ಇಬ್ಬರನ್ನು ತೋರಿಸಿದನು. ಆದರೆ ಶೈತಾನನು ನನ್ನ ದಾರಿ ತಪ್ಪಿಸಲು ಪ್ರಯತ್ನಿಸಿದನು. ಈಗ ಅಲ್ಲಾಹನಿಗೆ ಕೃತಜ್ಞತೆ ಅರ್ಪಿಸುತ್ತೇನೆ. ಅವನು ನನಗೆ ಸತ್ಯವನ್ನು ಸ್ವೀಕರಿಸುವ ಭಾಗ್ಯ ನೀಡಿದನು. ಈಗ ನಾನು ಶೈತಾನನ ಹಿಡಿತದಿಂದ ಹೊರಗೆ ಬಂದಿರುವೆನು. ನನ್ನ ಸ್ಥಿರತೆಗೋಸ್ಕರ ಮತ್ತು ನನ್ನನ್ನು ಅಲ್ಲಾಹನು ಕ್ಷಮಿಸಲಿಕ್ಕೋಸ್ಕರ ಪ್ರಾರ್ಥಿಸಲು ಬೇಡಿಕೊಳ್ಳುತ್ತೇನೆ.

ಅಲ್ಲಾಹನು ಈ ಮಹಿಳೆಗೆ ಸ್ಥಿರತೆ ದಯಪಾಲಿಸಲಿ.

ಮಾಲಿ ದೇಶದಿಂದ ಅಬ್ದುಲ್ಲಾ ಸಾಹಿಬ್ ಮುಅಲ್ಲಿಂ ಬರೆಯುತ್ತಾರೆ. ಬಾಮಾಕೊ ಎಂಬ ಸ್ಥಳದಲ್ಲಿ ಉಸ್ತಾದ್ ದಾಮ್‌ಬ್ಲೇ ಅಹ್ಮದಿಯತ್ತಿನ ಕಠಿನ ಶತ್ರುವಾಗಿದ್ದರು. ಅವರು ಅಹ್ಮದಿಯಾ ರೇಡಿಯೋ ಸ್ಟೇಶನ್‌ಗೆ ಟೆಲಿಫೋನ್ ಮಾಡುವಾಗ ಬೈಯುತ್ತಾ ಇದ್ದರು. ಅವರಿಗೆ ನಾವು ಟೆಲಿಫೋನ್ ಮಾಡಿದರೂ ಅವರು ಆಗ ಸಹ ಬೈಯ್ಯುತ್ತಿದ್ದರು. ಇದು ಕೆಲವು ಕಾಲ ಮುಂದುವರಿಯಿತು. ಒಂದು ದಿನ ಅವರು ನಮ್ಮ ರೇಡಿಯೋ ಸ್ಟೇಶನ್ 'ರಬ್‌ವ F.M.'ಗೆ ಫೋನ್ ಮಾಡಿ ಅಳುತ್ತಾ ಹೇಳಿದರು: 'ನಾನು ರಾತ್ರಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ಕನಸಿನಲ್ಲಿ ಕಂಡೆನು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಜೊತೆಗೆ ಇದ್ದ ಅಂತಹ ಒಂದು ಪ್ರಕಾಶವನ್ನು ನಾನು ಹಿಂದೆ ಎಂದೂ ಕಂಡಿರಲಿಲ್ಲ.' ಆದುದರಿಂದ ಅವರು ಹೃತ್ಪೂರ್ವಕವಾಗಿ ಜಮಾಅತಿನಿಂದ ಕ್ಷಮೆಯಾಚಿಸುವುದಾಗಿಯೂ ಅಹ್ಮದಿಯರು ಕ್ಷಮಿಸದಿದ್ದರೆ ಅಲ್ಲಾಹನೂ ತನ್ನನ್ನು ಕ್ಷಮಿಸಲಾರನೆಂದು ಹೆದರುತ್ತಿರುವುದಾಗಿಯೂ ಹೇಳಿದರು. ಆಗ ಮುಅಲ್ಲಿಮ್ ಸಾಹೇಬರು ಅವರನ್ನು ಅಹ್ಮದಿಯ್ಯತ್ತಿನಲ್ಲಿ ಸೇರಲು ಆಮಂತ್ರಿಸಿ ಹೇಳಿದರು: ಈಗ ಸತ್ಯ ನಿಮಗೆ ಸ್ಪಷ್ಟವಾಗಿದೆ. ನೀವು ಬೈಅತ್ ಮಾಡಿರಿ. ಅವರು ಅಹ್ಮದಿಯ್ಯತ್ ಅಥವಾ ಯಥಾರ್ಥ ಇಸ್ಲಾಮಿಗೆ ಸೇರಿದರು.

ಹಝ್ರತ್ ಖಲೀಫತುಲ್ ಮಸೀಹ್ ಹೇಳಿದರು: ಇವುಗಳೆಲ್ಲಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಗೆ ಅಲ್ಲಾಹನು ನೀಡುವ ಬೆಂಬಲಗಳು ಮತ್ತು ದೃಷ್ಟಾಂತಗಳಾಗಿವೆ. ಇವುಗಳನ್ನು ದೃಷ್ಟಾಂತಗಳೆಂದು ಒಪ್ಪುವುದಿಲ್ಲವಾದರೆ ಜನರ ಹೃದಯದಲ್ಲಿ ಈ ಕೋಲಾಹಲ ಉಂಟು ಮಾಡುತ್ತಿರುವುದು ಮತ್ತೇನು? ಇತರ ಮುಸ್ಲಿಮರು ಈ ಸತ್ಯವನ್ನು ಅರಿತಿದ್ದರೆ ಎಷ್ಟು ಚೆನ್ನಾಗಿತ್ತು. ಅವರು ಸತ್ಯವನ್ನು ತಿಳಿಯಲು ಪ್ರಾರ್ಥಿಸಬೇಕು. ಅಲ್ಲಾಹನಿಂದ ಮಾರ್ಗದರ್ಶನ ಬೇಡಿಕೊಳ್ಳಿರಿ. ಅವರು ವಿರೋಧಿಸುವುದಕ್ಕೆ

ಬದಲಾಗಿ ನೇರಮಾರ್ಗವನ್ನು ಹುಡುಕುವ ಬಗ್ಗೆ ಆಸಕ್ತರಾಗಬೇಕಾಗಿದೆ. ಅಲ್ಲಾಹನು ಅವರಿಗೆ ಮಾರ್ಗದರ್ಶನ ನೀಡುವವನಾಗಲಿ. ಅಲ್ಲಾಹನು ಅವರಿಗೆ ಸತ್ಯವನ್ನರಿಯುವ ಭಾಗ್ಯ ನೀಡಲಿ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಂ ಹೀಗೆ ಹೇಳುತ್ತಾರೆ: ನಾನು ಅಲ್ಲಾಹನ ಕಡೆಯಿಂದ ಬಂದವನು ಎಂದು ಸಾಬೀತುಮಾಡಲು ಅಲ್ಲಾಹನು ಎಷ್ಟು ದೃಷ್ಟಾಂತಗಳನ್ನು ಪ್ರಕಟಿಸಿದನೆಂದರೆ ಅವುಗಳನ್ನು ಒಂದು ಸಾವಿರ ಪ್ರವಾದಿಗಳಿಗೆ ಹಂಚಿದರೂ ಆ ಪ್ರವಾದಿಗಳ ನುಬುವ್ವತ್ ಅದರಿಂದ ಸಾಬೀತಾಗುವುದು. ಆದರೆ ಇದು ಆಖರೀ ಝಮಾನವಾದುದರಿಂದ ಶೈತಾನ್ ಮತ್ತು ಅವನ ಸಂತಾನಕ್ಕೆ ಸೇರಿದವರು ಕೊನೆಯ ಆಕ್ರಮಣ ಮಾಡಲಿದ್ದರು. ಆದುದರಿಂದ ಶೈತಾನನನ್ನು ಸೋಲಿಸಲು ಸಾವಿರಾರು ದೃಷ್ಟಾಂತಗಳನ್ನು ಒಂದು ಕಡೆ ಜಮಾಯಿಸಲಾಯಿತು ಆದರೂ ಕೂಡ ಮನುಷ್ಯರಲ್ಲಿ ಇರುವ ಶೈತಾನರು ನಂಬುವುದಿಲ್ಲ. ಅವರು ಸುಳ್ಳು ಸೃಷ್ಟಿಸಿ ಅನ್ಯಾಯವಾದ ರೀತಿಯಲ್ಲಿ ಆಕ್ಷೇಪಿಸುತ್ತಾರೆ. ದೇವನು ಸ್ಥಾಪಿಸಿದ ಈ ಜಮಾಅತ್ ಹೇಗಾದರೂ ನಾಶವಾಗಲಿ ಎಂದು ಬಯಸುತ್ತಾರೆ. ಆದರೆ ಅಲ್ಲಾಹನು ತನ್ನ ಈ ಜಮಾಅತನ್ನು, ಅದು ಪರಿಪೂರ್ಣ ವಿಜಯ ಸಾಧಿಸುವ ತನಕ ತನ್ನ ಕೈಗಳಿಂದ ಸುಶಕ್ತಗೊಳಿಸಲು ಬಯಸುತ್ತಾನೆ.

ಕೊನೆಗೆ ಹಝ್ರತ್ ಖಲೀಫತುಲ್ ಮಸೀಹ್ ಹೇಳಿದರು: ಮುಸ್ಲಿಮ್ ಸಮುದಾಯದ ಎಲ್ಲರಿಗೋಸ್ಕರ ಮತ್ತು ಮುಸ್ಲಿಮ್ ದೇಶಗಳಿಗೋಸ್ಕರ ಪ್ರಾರ್ಥಿಸಬೇಕೆಂದು ಅಪೇಕ್ಷಿಸುತ್ತೇನೆ. ಅಲ್ಲಾಹನು ಅವರಲ್ಲಿಯೂ ಆ ದೇಶಗಳಲ್ಲೂ ಶಾಂತಿ ಮತ್ತು ನೆಮ್ಮದಿ ದಯಪಾಲಿಸಲಿ. ಶಾಂತಿ ವಾಸ್ತವಿಕವಾಗಿ ಸ್ಥಾಪಿಸಲ್ಪಡಬೇಕಾದರೆ ಒಂದೇ ಒಂದು ಮಾರ್ಗವಿದೆ. ಅಲ್ಲಾಹನು ಯಾರನ್ನು ಇಮಾಮ್ ಮಹ್‌ದಿಯಾಗಿ ಕಳುಹಿಸಿರುವನೋ ಯಾರನ್ನು ಲೋಕದಲ್ಲಿ ಶಾಂತಿ ಸ್ಥಾಪನೆಗಾಗಿ ಕಳುಹಿಸಿರುವನೋ ಆ ಮಹಾತ್ಮರನ್ನು ನಂಬಬೇಕು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮರು ಭವಿಷ್ಯ ನುಡಿದ ಈ ಮಹ್‌ದಿಯನ್ನು ಅವರು ಸ್ವೀಕರಿಸಬೇಕು. ಈಗಿನ ಕಾಲದ ಕಲಹ, ದುಃಖ ಅಶಾಂತಿಗಳಿಂದ ರಕ್ಷಣೆ ಪಡೆಯಲಿರುವ ಮಾರ್ಗ ಇದು ಮಾತ್ರವಾಗಿದೆ. ಅಲ್ಲಾಹನು ಅವರಿಗೆ ಭಾಗ್ಯ ನೀಡಲಿ.

--------------*****---------------

*Friday Sermon delivered by Hadrath Khaleefathul Masih Al Khamis (atba)*
*at Masjid Baithul Futhuh, London on 28-03-2014*

***Kannada Translation:*** M Ubeidullah

***Revised by:*** M P Ibrahim | ***Typing:*** U Basheer Ahmad

***Published By:*** Kannada Isha'at Team, *Ahmadiyya Muslim Jama`at, Karnataka*

**Contact Us**: Darussalam, Ahmadiyya Muslim Mission,
Behind Deltawest Building, Near Railway Level Crossing,
Pandeshwer, Mangalore – 575 001

*Email*: **khutuba.kannada@gmail.com**